ದಿನಾಂಕ 01.03.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ- ಶ್ರೀ.ಎ.ಬಿ.ಕೆ. ವಕೀಲರಿಂದಃ-**

1ನೇ ಪ್ರತಿವಾದಿಯು 2000 ಇಸವಿಯಿಂದ ಕಾನೂರಿನಲ್ಲಿ ಇರುವ ಅವರ ಜಾಗದಲ್ಲಿ ನೆಲೆಸಿದ್ದಾರೆ. ಮೃತ ಅರವಿನ್ ರವರ ವಿವಾಹವು 1ನೇ ಪ್ರತಿವಾದಿಯೊಂದಿಗೆ 2007 ರಲ್ಲಿ ಆಗಿರುತ್ತದೆ ಎಂದರೆ ಸರಿ. 1ನೇ ಪ್ರತಿವಾದಿಗೆ ಒಬ್ಬ ಮಗನಿದ್ದಾನೆ. ಆತ ಎಲ್.ಕೆ.ಜಿ ಯಿಂದ 6ನೇ ತರಗತಿಯವರೆಗೆ ಕಾಲ್ಸ್ ಶಾಲೆಯಲ್ಲಿ ವ್ಯಾಸಂಗ ಮಾಡಿರುತ್ತಾರೆ ಎಂದರೆ ಸರಿ. ನನ್ನ ಮಗ ಲಯನ್ಸ್ ಶಾಲೆಯಲ್ಲಿ ಓದುತ್ತಿದ್ದಾನೆ. ಕಾಲ್ಸ್ ಶಾಲೆಯಲ್ಲಿ ಶಾಲಾ ಶುಲ್ಕದ ಮೊದಲ ಕಂತನ್ನು ಏಪ್ರಿಲ್ ಮತ್ತು ಮೇ ನಲ್ಲಿ ತೆಗೆದುಕೊಳ್ಳುತ್ತಾರೆ ಹಾಗೂ ಎರಡನೇ ಕಂತನ್ನು ಅಕ್ಟೋಬರ್ ನಲ್ಲಿ ತೆಗೆದುಕೊಳ್ಳುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅರವಿನ್ ರವರಿಗೆ ದಿಃ 03.01.2021 ರಂದು ಮಗನ ಶಾಲೆಯ ಶುಲ್ಕವನ್ನು ಪಾವತಿ ಮಾಡುವ ಕಂತು ಇಲ್ಲದೇ ಇದ್ದುದ್ದರಿಂದ ಹಾಗೂ ಬ್ಯಾಂಕಿನಲ್ಲಿ ಯಾವುದೇ ಸಾಲ ಮಾಡದೇ ಇದ್ದುದ್ದರಿಂದ ನನ್ನ ಬಳಿ ಸಾಲ ಪಡೆಯುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ. 1 ಮತ್ತು 2 ರಲ್ಲಿರುವ ಬರವಣಿಗೆ ಮತ್ತು ಸಹಿ ಅರವಿನ್ ರವರದ್ದು ಅಲ್ಲ ಎಂದರೆ ಸರಿಯಲ್ಲ. ನಾನು ನಿಪಿ. 1 ಮತ್ತು 2 ದಾಖಲೆಗಳನ್ನು ಅರವಿನ್‌ರವರಿಗೆ ತಿಳಿಯದಂತೆ ಅವರ ಕಾರಿನಿಂದ ತೆಗೆದುಕೊಂಡು ಅವರ ಸಹಿಗಳನ್ನು ಮತ್ತು ಅದರಲ್ಲಿರುವ ಬರವಣಿಗೆಗಳನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ. 1 ಮತ್ತು 2 ದಾಖಲೆಗಳನ್ನು ಅರವಿನ್ ರವರು ನೀಡದೇ ಇರುವುದರಿಂದ ಅವುಗಳು ಪ್ರತಿವಾದಿಗಳಿಗೆ ಬಂಧನಕಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ.

ದಿಃ 03.01.2021 ರಂದು ನನ್ನ ಬಳಿ ರೂ. 4,80,000/- ಹಣ ಇದ್ದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ದಿನಾಂಕದಂದು ನನ್ನ ಬಳಿ ರೂ. 4,80,000/- ಹಣ ಇರಲಿಲ್ಲ ಎಂದರೆ ಸರಿಯಲ್ಲ.

1ನೇ ಪ್ರತಿವಾದಿಯ ಗಂಡ ತಾನು ಪಡೆದ ಸಾಲದ ಹಣಕ್ಕೆ ಭದ್ರತೆಯಾಗಿ ಆಸ್ತಿಯನ್ನು ನೀಡಿರುವ ಬಗ್ಗೆ ನಾನು ವಾದಪತ್ರದಲ್ಲಿ ತಿಳಿಸಿರುವುದಿಲ್ಲ. ನಾನು ಸದರಿ ವಿಚಾರವನ್ನು ವಾದ ಪತ್ರದಲ್ಲಿ ತಿಳಿಸಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸದರಿ ವಿಚಾರವನ್ನು ವಕೀಲರ ನೋಟಿಸಿನಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ. ನಾನು ಪ್ರತಿವಾದಿಗಳಿಂದ ಹಣವನ್ನು ಪಡೆಯುವ ದುರುದ್ದೇಶದಿಂದ 1ನೇ ಪ್ರತಿವಾದಿಯ ಗಂಡ ಸಾಲಕ್ಕೆ ಭದ್ರತೆಗಾಗಿ ಆಸ್ತಿಯನ್ನು ಬರೆದುಕೊಟ್ಟಿ ರುವುದಾಗಿ ವಾದ ಪತ್ರದಲ್ಲಿ ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಮಧ್ಯಂತರ ಅರ್ಜಿಯಲ್ಲಿ ನಮೂದಿಸಿರುವ ಸ್ವತ್ತನ್ನು ಮುಟ್ಟುಗೋಲು ಹಾಕಿಕೊಳ್ಳಲು ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ಚೆಕ್ಕನ್ನು ಅದರಲ್ಲಿ ನಮೂದಿಸಿರುವ ದಿನಾಂಕದಿಂದ 3 ತಿಂಗಳ ಒಳಗಡೆ ಬ್ಯಾಂಕಿಗೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಆದುದರಿಂದ ನಾನು ದಾವೆಯಲ್ಲಿ ಕೋರಿರುವ ಪರಿಹಾರವನ್ನು ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ನಾನು ವಾದಪತ್ರದಲ್ಲಿ ಕೋರಿರುವಂತಹ ಹಣವನ್ನು ನೀಡಲು ಪ್ರತಿವಾದಿಗಳು ಪಡೆಯಲು ಬದ್ಧರಲ್ಲ ಎಂದರೆ ಸರಿಯಲ್ಲ. ಅರವಿನ್ ರವರಿಗೆ ಇಬ್ಬರು ಸಹೋದರಿಯರು ಇದ್ದಾರೆ ಎಂದರೆ ಸರಿ. ನಾನು ಪ್ರತಿವಾದಿಗಳಿಂದ ಹಣವನ್ನು ಪಡೆಯುವ ದುರುದ್ದೇಶದಿಂದ ಈ ದಾವೆಯನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಕಾಫಿ ಕೀಳುವ ಅವಧಿ ಡಿಸೆಂಬರ್ ನಿಂದ ಫೆಬ್ರವರಿಯವರೆಗೆ ಇರುತ್ತದೆ ಎಂದರೆ ಸರಿ. 1ನೇ ಪ್ರತಿವಾದಿಯ ಗಂಡನಿಗೆ ರೂ. 4,80,000/- ಹಣವನ್ನು ನೀಡಲು ಸಾಮರ್ಥ ನನಗೆ ಇರಲಿಲ್ಲ ಎಂದರೆ ಸರಿಯಲ್ಲ. ದಿಃ 03.01.2021 ರಂದು ಅರವಿನ್ ರವರಿಗೆ ಕಾಫಿ ಬೆಳೆ ಮಾರಾಟದಿಂದ ಸಾಕಷ್ಟು ಹಣ ಅವರ ಬಳಿ ಇದ್ದುದ್ದರಿಂದ ನನ್ನ ಬಳಿ ಸಾಲ ಕೇಳುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>- ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ

ಸಹಿಃ
ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.

**(ಸಾಕ್ಷಿದಾರರ ಸಹಿ)**